# ‘ಕುಂಕುಮ್’ ಜೂಹಿಯ ಕೋಟಿ ಕಿರೀಟ!



ಈಕೆ ಜೂಹಿ ಪರ್ಮಾರ್. ಹಾಗೆಂದರೆ ತಕ್ಷಣಕ್ಕೆ ಗೊತ್ತಾಗಲಿಕ್ಕಿಲ್ಲ. ಕುಂಕುಮ್ ಅಂದರೆ, ಸಾಕು ಟೀವಿ ಸೀರಿಯಲ್‌ಗಳ ಮುಂದೆ ಕಣ್ಣರಳಿಸಿ ಕೂರುವ ಹೆಂಗಳೆಯರ ಕಣ್ಣರಳುತ್ತದೆ! ಕಳೆದ ವಾರವಿಡೀ ಮಾಧ್ಯಮಗಳಲ್ಲಿ ಈಕೆಯದ್ದೇ ಸುದ್ದಿ. ಕಲರ್ಸ್ ಚಾನೆಲ್‌ನ ಬಹು ಜನಪ್ರಿಯ ರಿಯಾಲಿಟಿ ಷೋ ‘ಬಿಗ್ ಬಾಸ್’ ಐದನೇ ಅವತರಣಿಕೆಯಲ್ಲಿ ಈ ಜೂಹಿ ಪರ್ಮಾರ್ ಫೈನಲ್‌ನಲ್ಲಿ ಗೆದ್ದು ಒಂದು ಕೋಟಿ ರೂಪಾಯಿ ಬಹುಮಾನ ಗಳಿಸಿದಳು!

‘ಬಿಗ್ ಬಾಸ್’ ರಿಯಾಲಿಟಿ ಷೋ ಎಂದರೇ ವಿವಾದ. ಅದಕ್ಕೆ ತಕ್ಕಂತೆ ಬಿಗ್‌ಬಾಸ್ ಮನೆಗೆ ಪ್ರವೇಶಿಸುವ ಅತಿಥಿಗಳು! ಒಂದೋ ತಿಕ್ಕಲುತನ ಅಥವಾ ಕಾಲು ಕೆರೆದು ಜಗಳವಾಡುವುದು! ಈ ಸಲವಂತೂ ಸಿನಿಮಾ, ಟೀವಿ ಸೆಲೆಬ್ರಿಟಿಗಳ ಮಧ್ಯೆ ಸ್ವಾಮಿ ಅಗ್ನಿವೇಶ್ ಕೂಡಾ ಪ್ರವೇಶಿಸಿ ಈ ಷೋ ಸುದ್ದಿ ಮನೆಯಲ್ಲಿ ಹಾಟ್ ಅನ್ನಿಸಿಕೊಂಡಿತು.

ಹಾಗೆ ನೋಡಿದರೆ ಜೂಹಿ ಪರ್ಮಾರ್ ತಣ್ಣನೆಯ ವ್ಯಕ್ತಿತ್ವದವಳು. ಅನಗತ್ಯ ಜಗಳಕ್ಕೆ ಜಂಜಾಟಕ್ಕೆ ಸಿಲುಕಲೇ ಇಲ್ಲ. ಹಾಗೆ ತಣ್ಣಗೆ ಇದ್ದೇ ಒಂದು ಕೋಟಿಯ ಕಿರೀಟ ಗೆದ್ದುಕೊಂಡಳು. ಒಟ್ಟು ಹದಿಮೂರು ಜನ ಸ್ಪರ್ಧಿಗಳಲ್ಲಿ, ಅಂತಿಮ ಹಣಾಹಣಿಗೆ ಉಳಿದದ್ದು ಆಕಾಶ್‌ದೀಪ್ ಸೈಗಲ್, ಅಮರ್ ಉಪಾಧ್ಯಾಯ್, ಸಿದ್ದಾರ್ಥ್ ಭಾರಧ್ವಾಜ್, ಮೆಹೆಕ್ ಚಾಹಲ್ ಮತ್ತು ಜೂಹಿ. ಈ ಗೆಲುವಿನ ಮೂಲಕ 31ರ ಹರೆಯದ ಜೂಹಿ, ‘ಬಿಗ್ ಬಾಸ್ ಟ್ರೋಫಿ ಪಡೆದ ಎರಡನೇ ಮಹಿಳೆ’ ಎನ್ನಿಸಿಕೊಂಡಿದ್ದಾಳೆ.

ಜೂಹಿ ಪರ್ಮಾರ್ ಕಿರುತೆರೆ ನಟಿ, ನಿರೂಪಕಿ, ಗಾಯಕಿ, ನೃತ್ಯಗಾರ್ತಿ– ಹೀಗೆ ಬಹುಮುಖ ಪ್ರತಿಭೆ. ಹುಟ್ಟಿದ್ದು ಉಜ್ಜಯಿನಿಯಲ್ಲಿ, ಬೆಳೆದದ್ದು ರಾಜಸ್ಥಾನದ ಜೈಪುರದಲ್ಲಿ. ಚಿಕ್ಕಂದಿನಲ್ಲಿ ತನ್ನ ಅಂಕಲ್ ಅವರು ನಾಟಕದಲ್ಲಿ ನಿರ್ವಹಿಸಿದ ಪಾತ್ರವನ್ನು ನೋಡಿದ ಜೂಹಿಗೆ ತಾನೂ ನಟಿಯಾಗಬೇಕು ಎಂಬ ಆಸೆ ಹುಟ್ಟಿತಂತೆ. ನಟನೆ, ಫ್ಯಾಷನ್ ಷೋಗಳಲ್ಲಿ ನಿರಂತರ ಭಾಗವಹಿಸಿದ ಜೂಹಿ 19ರ ಹರೆಯದಲ್ಲೇ ‘ಮಿಸ್ ರಾಜಸ್ಥಾನಿ’ ಬಿರುದು ಗೆದ್ದುಕೊಂಡಳು.

ಆ ಬಳಿಕ ಟೀವಿ ಧಾರಾವಾಹಿಗಳಲ್ಲಿ ಒಂದೊಂದಾಗಿ ಅವಕಾಶಗಳು ಬರಲಾರಂಭಿಸಿದವು. ಈಕೆ ಹೆಚ್ಚು ಜನಪ್ರಿಯವಾಗಿದ್ದು ‘ಕುಂಕುಮ್’ ಧಾರಾವಾಹಿಯ ಮೂಲಕ. ಈ ಧಾರಾವಾಹಿಯಲ್ಲಿ ಕೂಡು ಕುಟುಂಬದಲ್ಲಿ ಎಲ್ಲರೊಂದಿಗೆ ಹೊಂದಿಕೊಂಡು ಹೋಗುವ ಪಾತ್ರ ಈಕೆಯದ್ದು. ಟೀವಿಯಲ್ಲಿ ಹಿಂದಿ ಧಾರಾವಾಹಿಗಳ ಅತ್ಯಂತ ಜನಪ್ರಿಯ ಸೊಸೆ ಈ ಜೂಹಿ. ಪಾತ್ರ ಪೋಷಣೆಗೆ ಅನೇಕ ಟೀವಿ ಪ್ರಶಸ್ತಿಗಳನ್ನೂ ಈಕೆ ಗೆದ್ದಿದ್ದಾಳೆ.



ಗಂಡನ ಜೊತೆ ಜೂಹಿ

‘ಪೆಹಚಾನ್’ ಮತ್ತು ‘ತೇರೆ ಇಷ್ಕ್ ಮೇ’ ಎಂಬ ಎರಡು ಪಾಕಿಸ್ತಾನಿ ಧಾರಾವಾಹಿಯಲ್ಲೂ ಈಕೆ ನಟಿಸಿದ್ದಾಳೆ. ‘ಪತಿ, ಪತ್ನಿ ಔರ್ ವೋ’ ಮತ್ತು ‘ಮಾ ಎಕ್ಸ್‌ಚೇಂಜ್’ ರಿಯಾಲಿಟಿ ಷೋಗಳಲ್ಲೂ ಮಿಂಚಿದ್ದಾಳೆ. ಲವಲವಿಕೆಯ ನಟನೆ ಈಕೆಯದ್ದು. ನೋಡಲು ಸುಂದರವಾಗಿದ್ದರೂ ತುಸು ದಪ್ಪಗಿದ್ದ ಕಾರಣ ಎಷ್ಟೋ



ಅವಕಾಶಗಳಿಂದ ವಂಚಿತಳಾದದ್ದೂ ಇದೆಯಂತೆ.

‘ಬಿಗ್ ಬಾಸ್’ನಲ್ಲಿ ಪಾಲ್ಗೊಳ್ಳಲು ಕರೆ ಬಂದದ್ದು ಬಹಳ ಆಕಸ್ಮಿಕವಾಗಿ. “ಖುಷಿಯಾಯ್ತು. ನನ್ನ ಎರಡನೇ ಇನ್ನಿಂಗ್ಸ್ ಪ್ರಾರಂಭಿಸಲು ಆತ್ಮವಿಶ್ವಾಸದಿಂದ ತಯಾರಾದೆ. ಈ ಷೋ ಸಲುವಾಗಿ ಹತ್ತು ಕೇಜಿ ತೂಕ ಕೂಡಾ ಇಳಿಸಿಕೊಂಡೆ” ಎನ್ನುತ್ತಾಳೆ ಜೂಹಿ. “ಏನು ಮಾಡೋದು, ನನ್ನ ದೇಹ ಸ್ವಲ್ಪ ದಪ್ಪಗಿದೆ. ಈ ತೂಕ ನನ್ನ ವೃತ್ತಿಜೀವನಕ್ಕೆ ದೊಡ್ಡ ತೊಡಕಾಗಿದೆ. ಆರೋಗ್ಯದ ಕೆಲವು ಸಮಸ್ಯೆಗಳಿಂದಾಗಿಯೇ ತೂಕ ಹೆಚ್ಚಾಗುತ್ತಿದೆ. ಸಿನಿಮಾದಲ್ಲಿ ನಟಿಸಬೇಕೆಂದರೆ ದೇಹದ ಸಪೂರ ಆಕಾರ ಮುಖ್ಯ. ನನ್ನ ಮುಂದಿನ ಗುರಿ ತೂಕವನ್ನು ಇಳಿಸುವುದು” ಎನ್ನುವುದು ಈಕೆಯ ಶಪಥ.

‘ಬಿಗ್‌ಬಾಸ್’ನಲ್ಲಿ ಸ್ಕೈ ಮತ್ತು ಸನ್ನಿ ಲಿಯೋನ್‌ನ ಸ್ನೇಹದ ಹೊರತು ಉಳಿದವರ ಬೆಂಬಲ ಈಕೆಗೆ ಅಷ್ಟಾಗಿ ಇರಲಿಲ್ಲ. ಅಲ್ಲದೆ ಪೂಜಾ ಬೇಡಿಯ ಜತೆಗೇ ಹೆಚ್ಚಾಗಿ ಇರುತ್ತಿದ್ದ ಕಾರಣ ‘ಪೂಜಾ ಕಿ ಚಮ್ಚಿ’ ಎಂಬ ಬಿರುದೂ ಸಿಕ್ಕಿತ್ತು. ಆದರೆ ಯಾವ ಟೀಕೆಗೂ ಕಿವಿಗೊಡದೆ ತಾಳ್ಮೆಯಿಂದ ಎದುರಿಸಿದ ಈಕೆ, ಹೆಚ್ಚು ವಾದ– ವಿವಾದಗಳಿಗೆ ಕಾರಣವಾಗಲಿಲ್ಲ. ಈ ತಾಳ್ಮೆಯೇ ಈಕೆಯ ಗೆಲುವಿನ ಮೆಟ್ಟಿಲಾಯಿತು.

“ಗ್ರಾಂಡ್ ಫಿನಾಲೆಗೆ ಮುನ್ನಾ ದಿನ ವೀಕ್ಷಕರಲ್ಲಿ ಮತ ಯಾಚಿಸುವಾಗ ಈ ಹಂತದವರೆಗೆ ತಲುಪಲು ಕಾರಣವಾದ ಒಂದೊಂದು ಮತದ ಅರಿವು ನನಗಿದೆ. ನನ್ನ ಸ್ವಭಾವ ಇಷ್ಟವಾದಲ್ಲಿ ನನಗೆ ಬಿಗ್ ಬಾಸ್ ಟ್ರೋಫಿ ದಕ್ಕುವಂತೆ ಮಾಡುವಿರಿ ಎಂದೆ. ಜನ ಮೆಚ್ಚಿ ಮತ ನೀಡಿದರು” ಎಂದು ನಗುತ್ತಾಳೆ ಜೂಹಿ.

ಅಂದ ಹಾಗೆ ಜೂಹಿಯ ಗೆಲುವಿಗೆ ಆಕೆಯ ಗಂಡನ ಬೆಂಬಲವೇ ಕಾರಣವಂತೆ. “ಪ್ರತಿ ಮಹಿಳೆಯ ಯಶಸ್ಸಿನ ಹಿಂದೆ ಒಬ್ಬ ಪುರುಷ ಇರುತ್ತಾನೆ. ನನ್ನ ಹಿಂದೆ ನನ್ನ ಗಂಡನಿದ್ದ” ಎಂದು ಟೀವಿ ನಟ ಹಾಗೂ ವಾಣಿಜ್ಯೋದ್ಯಮಿ ಆಗಿರುವ ಗಂಡ ಸಚಿನ್ ಶ್ರಾಫ್‌ನನ್ನು ಸ್ಮರಿಸಲು ಜೂಹಿ ಮರೆಯಲಿಲ್ಲ.

ಸಿನಿಮಾದಲ್ಲಿ ನಟಿಸಬೇಕು ಎನ್ನುವುದು ಜೂಹಿ ಆಸೆಯಂತೆ. ನೆಗೆಟಿವ್ ಪಾತ್ರವಾದರೂ ಪರವಾಗಿಲ್ಲ, ಉತ್ತಮ ಚಿತ್ರ ಸಿಕ್ಕರೆ ನಟಿಸುತ್ತೇನೆ ಎನ್ನುತ್ತಾಳೆ. ಅಂದ ಹಾಗೆ, ಇವಳ ಮೊದಲ ಪ್ರೀತಿ ಸಲ್ಮಾನ್ ಖಾನ್ ಅಂತೆ! ಟೀವಿಗೆ ಬಂದವಳು ಸಿನಿಮಾಗೆ ಬಾರದಿರುವಳೆ? ಶೀಘ್ರವೇ ಜೂಹಿ ಬೆಳ್ಳಿತೆರೆಗೆ ಕಾಲಿಡಲೂಬಹುದು.

■ ವಿದ್ಯಾ ಕುಂದಾಪುರ